ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿರುವ ಎಷ್ಟು ಕೈಗಾರಿಕಾ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗಿದೆ? (ಮಾರಾಟ ಮೊತ್ತ ಸಹಿತ ವಿವರ ನೀಡುವುದು)

ಆ) ಮಾರಾಟ ಮಾಡಿದ ಉದ್ಯಮಗಳಲ್ಲಿ ಇದ್ದ ಕಾರ್ಮಿಕರ ಹಿತಚಿಂತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಯಾವುದು ಇಲ್ಲ

ಆ) ಉದ್ಭವಿಸುವುದಿಲ್ಲ.

ವಿಷಯ:- ಶುಶ್ರೂಷಾ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1332 (1849)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ಹೊಸ ಕಾರ್ಯಕ್ರಮ ಶುಶ್ರೂಷಾ ಯೋಜನೆಯಲ್ಲಿ ಕುಂದಾಪುರ ಕ್ಷೇತ್ರದಲ್ಲಿ ಈಗಾಗಲೇ ವೈದ್ಯಕೀಯ ಇಲಾಖೆಯವರು ಭೇಟಿ ಇತ್ತ ಗ್ರಾಮಗಳೆಷ್ಟು ? (ಗ್ರಾಮವಾರು, ದಿನಾಂಕವಾರು ವಿವರ ನೀಡುವುದು)

ಆ) ಈ ಭೇಟಿಯ ಕಾಲದಲ್ಲಿ ತಪಾಸಣೆ ಮಾಡಿದ ರೋಗಿಗಳೆಷ್ಟು ? (ಗ್ರಾಮವಾರು, ದಿನಾಂಕವಾರು ವಿವರ ನೀಡುವುದು)

ಇ) ಇದಕ್ಕೆ ತಗುಲಿದ ವೆಚ್ಚವೆಷ್ಟು ? (ಗ್ರಾಮವಾರು, ಔಷಧಿಯ ಮೊತ್ತ, ತಂಡದವರ ಖರ್ಚಿನ ವಿವರ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 8 (ಗ್ರಾಮವಾರು, ದಿನಾಂಕವಾರು ವಿವರಗಳನ್ನು ಲಗತ್ತಿಸಿದ ತಃಖ್ತೆಯಲ್ಲಿ ನೀಡಿದೆ)

ಆ) 811
(ಗ್ರಾಮವಾರು, ದಿನಾಂಕವಾರು ವಿವರಗಳನ್ನು ತಃಖ್ತೆಯಲ್ಲಿ ನೀಡಿದೆ)

ಇ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಕ್ಷೇತ್ರದ ಶುಶ್ರೂಷಾ ಕಾರ್ಯಕ್ರಮದ ವರದಿ

| ಕ್ರಮ ಸಂಖ್ಯೆ | ಗ್ರಾಮಗಳ ಹೆಸರು | ಶುಶ್ರೂಷಾ ಕಾರ್ಯಕ್ರಮ ಜರುಗಿದ ದಿನಾಂಕ | ಮೊದಲನೆ ಬಾರಿಗೆ ವೈದ್ಯಕೀಯ ತಪಾಸಣೆ ಹೊಂದಿದವರ ಸಂಖ್ಯೆ |
|---|---|---|---|
| 1 | ಬೆಳ್ಳೆ | 29-10-91 | 80 |
| 2 | ಗಂಗೊಳ್ಳಿ | 22-10-91 | 126 |
| 3 | ಅಂಪಾರು | 20-10-91 | 84 |
| 4 | ಬಸ್ರೂರು | 26-10-91 | 120 |
| 5 | ಸಿದ್ಧಾಪುರ | 15-11-91 | 82 |
| 6 | ಕುಕ್ಕುಂಜೆ | 28-11-91 | 94 |
| 7 | ಕೋಟೇಶ್ವರ | 25-11-91 | 33 |
| 8 | ಅಮಾಸೆಬೈಲು | 20-11-91 | 192 |
| | ಮೊತ್ತ | | 811 |